## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ

## ರಟ್ಟಿಹಳ್ಳಿ

**ಕ್ರಿಮಿನಲ್ ಮೊಕದ್ದಮೆ ನಂಃ 741/2022**

ಸಿ.ಡಬ್ಲ್ಯೂ-14 ಪಿ.ಡಬ್ಲ್ಯೂ-4

ಸಾಕ್ಷಿಯ ಹೆಸರು ಃಅರವಿಂದ ಬಿ ಎಸ್

ತಂದೆಯ ಹೆಸರು ಃಸೋಮಶೇಖರಪ್ಪ

ವಯಸ್ಸು ಃ 38 ವರ್ಷ

ಉದ್ಯೋಗ ಃ ಪಿ ಎಸ್ ಐ ಜಿಲ್ಲಾ ವಿಶೇಷ ವಿಭಾಗ ದಾವಣಗೆರೆ

ವಾಸಸ್ಥಳ ಃ ದಾವಣಗೆರೆ

ದಿನಾಂಕಃ 10-06-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಸಸಅ ರವರಿಂದಃ

ದಿ. 22.11.2017 ರಿಂದ 15.07.2019 ರವರೆಗೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16.05.2019 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-13 ರವರಿಂದ ಪಡೆದುಕೊಂಡು ಪರಿಶೀಲಿಸಿ ಚಾಸಾ-8,9,12 ರವರನ್ನು ವಿಚಾರಿಸಿ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 20.05.2019 ರಂದು ಚಾಸಾ-10,11 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 29.06.2019 ರಂದು ಪ್ರಕರಣದ 2 ನೇ ಆರೋಪ ಮಾನ್ಯ ಧಾರವಾಡ ವಿಭಾಗೀಯ ಪೀಠದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು , ಜಾಮೀನು ನಿಯಮಾವಳಿ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ದಿನಾಂಕ 15.07.2019 ರಂದು ನನಗೆ ವರ್ಗಾವಣೆಯಾಗಿದ್ದರಿಂದ ಪ್ರಕರಣದ ಕಡತವನ್ನು ಮುಂದಿ ತನಿಖೆಗಾಗಿ ಚಾಸಾ-15 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಸಿ.ಡಬ್ಲ್ಯೂ-14　ಪಿ.ಡಬ್ಲ್ಯೂ-4**

**<u>ಪಾಟೀಸವಾಲುಃ</u>** 1 ಮತ್ತು 2 ನೇ ಆರೋಪಿತರ ಪರ ಶ್ರೀ ಎಮ್ ಬಿ ಪಿ ವಕೀಲರಿಂದ ಃ

ನಾನು ಚಾಸಾ-8 ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗುನ್ನಾ ಜಾಗೆಗೆ ಬೇಟಿ ನೀಡಿರುವುದಿಲ್ಲ ಎಂದರೆ ಸರಿ. ಚಾಸಾ-8 ರಿಂದ ಚಾಸಾ-12 ರವರ ಹೇಳಿಕೆಗಳನ್ನು ಸೃಷ್ಠಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ,
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ.